**ಸಾಕ್ಷಿಯನ್ನು ದಿನಾಂಕ 13.01.2026 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.**

**ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಿಂದ**

ನಾನು ಪಿ.ಯು.ಸಿ.ವರೆಗೆ ಓದಿರುತ್ತೇನೆ. ನನ್ನ ಸಾಕ್ಷ್ಯ ಪ್ರಮಾಣ ಪತ್ರ ಬರೆಸಲು ಮಾಹಿತಿಯನ್ನು ನಾನೇ ನೀಡಿರುತ್ತೇನೆ.

ನನ್ನ ಸಾಕ್ಷ್ಯ ಪ್ರಮಾಣ ಪತ್ರದಲ್ಲಿ ಹೇಳಲಾದ ವ್ಯವಹಾರ ಹುಬ್ಬಳ್ಳಿಯ ಭವಾನಿ ಆರ್ಕೇಡನಲ್ಲಿನ ನನ್ನ ಕಛೇರಿಯಲ್ಲಿ ಆಗಿರುತ್ತದೆ. ಆ ಸಮಯದಲ್ಲಿ ನಾನು, ವಾದಿ ಮತ್ತು ಪ್ರತಿವಾದಿ ಇದ್ದೇವು. ಹೊಲ ಖರೀದಿ ಸಂಬಂಧ ಖರೀದಿಯ ಹಣ ರೂ.36 ಲಕ್ಷಕ್ಕೆ ನಿಗದಿಯಾಗಿದ್ದು ರೂ.34 ಲಕ್ಷವನ್ನು ವಾದಿಯು ಪ್ರತಿವಾದಿಗೆ ನೀಡಿದರು. ಸದರಿ ಹೊಲದ ಸರ್ವೇ ನಂಬರ್ 114/4 ಆಗಿರುತ್ತದೆ. ಸದರಿ ಹೊಲದ ಚೆಕ್ ಬಂಧಿ ನನಗೆ ಹೇಳಲು ಆಗುವುದಿಲ್ಲ. ಸದರಿ ಹೊಲ ಯಾರ ಯಾರ ಹೆಸರಿನಲ್ಲಿ ಇರುತ್ತದೆ ಎಂದು ನನಗೆ ಗೊತ್ತಿಲ್ಲ.

ವಾದಿಯು ಪ್ರತಿವಾದಿಗೆ ರೂ.34 ಲಕ್ಷ ನೀಡಿದ್ದಾಗಿ ಹೇಳಿದ್ದು ಸದರಿ ನೋಟುಗಳು ರೂ.500/-, 200/- ಮತ್ತು 100/- ಮುಖಬೆಲೆಯ ನೋಟುಗಳಾಗಿದ್ದವು. ರೂ.100/-, 200/- ಮತ್ತು 500/-ರ ಎಷ್ಟು ನೋಟುಗಳಿದ್ದವು ಎಂದು ನನಗೆ ಹೇಳಲು ಆಗುವುದಿಲ್ಲ.

ನಿ.ಪಿ.1 ಕರಾರು ಪತ್ರವನ್ನು ಎಲ್ಲಿ ಟೈಪ್ ಮಾಡಿಸಲಾಯಿತು ಎಂಬ ಪ್ರಶ್ನೆಗೆ ಸಾಕ್ಷಿಯು ವಾದಿ ಮತ್ತು ಪ್ರತಿವಾದಿ ಅದನ್ನು ಟೈಪ್ ಮಾಡಿಸಿಕೊಂಡು ಬಂದಿದ್ದರು ಎನ್ನುತ್ತಾರೆ. ನಿ.ಪಿ.1 ಕ್ಕೆ ವಾದಿ ಮತ್ತು ಪ್ರತಿವಾದಿ ತಮ್ಮ ಸಹಿಗಳನ್ನು ನನ್ನ ಕಛೇರಿಯಲ್ಲಿ ಹಾಕಿರುತ್ತಾರೆ. ನಿ.ಪಿ.1 ರ 2 ನೇ ಪುಟದಲ್ಲಿ ವೈಟನರ್ ಬಳಸಲಾಗಿದೆ ಅಂದರೆ ನನಗೆ ಗೊತ್ತಾಗುವುದಿಲ್ಲ. ರೂ.34 ಲಕ್ಷವನ್ನು ವಾದಿ ಎಲ್ಲಿಂದ ತಂದರು ಎಂದು ನನಗೆ ಹೇಳಿರುವುದಿಲ್ಲ.

ನನಗೆ ಸಾಕ್ಷ್ಯ ಹೇಳಲು ನ್ಯಾಯಾಲಯದಿಂದ ಸಮನ್ಸ್ ಬಂದಿರುವುದಿಲ್ಲ. ಸಾಕ್ಷ್ಯ ಹೇಳುವಂತೆ ವಾದಿ ನನಗೆ ಹೇಳಿರುತ್ತಾರೆ. ನಾನು ಮತ್ತು ವಾದಿ ಒಂದೇ ಊರಿನವರು ಅಂದರೆ ಸರಿ. ನಾನು ಮತ್ತು ವಾದಿ ಆತ್ಮೀಯ ಸ್ನೇಹಿತರು ಅಂದರೆ ಸರಿ. ನಿ.ಪಿ.1 ಆಗುವ ಕಾಲಕ್ಕೆ ನಿ.ಪಿ.1 ಕ್ಕೆ ಸಹಿಯನ್ನು ಹೊರತುಪಡಿಸಿ ಪ್ರತಿವಾದಿಯಿಂದ ಯಾವುದೇ ದಾಖಲೆ ಬರೆಸಿಕೊಂಡಿರುವುದಿಲ್ಲ. ಪ್ರತಿವಾದಿ ತಾವು ಪಡೆದುಕೊಂಡ ಸಾಲದ ಭದ್ರತೆಗಾಗಿ ಖಾಲಿ ಬಾಂಡ್ ಮತ್ತು 2 ಚೆಕ್ಕುಗಳನ್ನು ವಾದಿಗೆ ಕೊಟ್ಟಿದ್ದರು ಅಂದರೆ ಸರಿಯಲ್ಲ. ನಾನು, ವಾದಿ ಮತ್ತು ಇತರರು ಸೇರಿ ಪ್ರತಿವಾದಿಯಿಂದ ಪಡೆದುಕೊಂಡ ಖಾಲಿ ಬಾಂಡ್ ಅನ್ನು ಅಡ್ಜಸ್ಟ್ ಮಾಡಿ ಅದರಲ್ಲಿ ಪ್ರಿಂಟ್ ಅನ್ನು ತೆಗೆಸಿದ್ದು ಆ ಕಾರಣಕ್ಕೆ ನಿ.ಪಿ.1 ಅನ್ನು ನೋಟರಿಕೃತ ಮಾಡಿರುವುದಿಲ್ಲ ಅಂದರೆ ಸರಿಯಲ್ಲ. ನಿ.ಪಿ.1 ಕ್ಕೆ ಸಂಬಂಧಿಸಿದಂತೆ ಇನ್ನೊಂದು ಪುಟಕ್ಕೆ ಪ್ರತಿವಾದಿಯ ಸಹಿ ಪಡೆದುಕೊಳ್ಳಬೇಕಾಗುತ್ತದೆ ಎಂದು ನಿ.ಪಿ.1 ರ ಪುಟ 1 ಮತ್ತು 2 ರಲ್ಲಿ ಅಡ್ಜಸ್ಟ್ ಮಾಡಿ ಪ್ರಿಂಟ್ ತೆಗೆಯಲಾಗಿರುತ್ತದೆ ಅಂದರೆ ಸರಿಯಲ್ಲ.

ನಾನು ಹೇಳಿದಂತೆ ವಾದಿಯು ಪ್ರತಿವಾದಿಗೆ ರೂ.34 ಲಕ್ಷ ಹಣವನ್ನು ನೀಡಿರುವುದಿಲ್ಲ ಅಂದರೆ ಸರಿಯಲ್ಲ. ವಾದಿಯು ನನ್ನ ಸ್ನೇಹಿತನಾಗಿರುವುದರಿಂದ ಅವರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಅಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಅದೆ.

ಸಹಿ/-

2 ನೇ ಹೆ ಹಿ ದಿ ನ್ಯಾ ಮತ್ತು ಜೆಎಂಎಫಸಿ,

ಧಾರವಾಡ.